ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 2, Sep-Oct 2020, 135-147
©*IIMRD*, Mysuru
IIMRD JOURNALS
www.iimrd.com

# ಮೈಸೂರು ಸಂಸ್ಥಾನದ ಪಂಚಮರ ಅಭಿವೃದ್ಧಿಯಲ್ಲಿ ಆರ್. ಗೋಪಾಲಸ್ವಾಮಿ ಅಯ್ಯರ್‌ರವರ ಪಾತ್ರ: ಒಂದು ವಿಶ್ಲೇಷಣೆ

**ಡಾ.ಕೆ.ಗುರುಸ್ವಾಮಿ**[1]

**ಪೀಠಿಕೆ**

ವೈದಿಕ ಹಾಗೂ ಉತ್ತರ ವೈದಿಕ ಕಾಲಗಳಿಂದಲೂ ಭಾರತೀಯ ಸಮಾಜವು ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಅಸಮಾನತೆಗಳ ಆವಾಸ ಸ್ಥಾನವಾಗಿದೆ. ಇಲ್ಲಿ ಸವರ್ಣೀಯ ವೈದಿಕಶಾಹಿಗಳು ಅಸಮಾನತೆಯ ಪ್ರತೀಕವಾದ ಚಾತುರ್ವರ್ಣ ವ್ಯವಸ್ಥೆಯ ಮೂಲಕ ಜಾತೀಯತೆ, ಅಸ್ಪೃಶ್ಯತೆ, ಸತಿಪದ್ಧತಿ, ಹೆಣ್ಣು ಶಿಶುಹತ್ಯೆ, ಬಾಲ್ಯವಿವಾಹ, ಜೀತಗಾರಿಕೆ, ದೇವದಾಸಿ ಪದ್ಧತಿ ಮುಂತಾದ ಜನವಿರೋಧಿ ಅಭ್ಯಾಸಗಳನ್ನು ಜಾರಿಗೊಳಿಸಿದ್ದರು. ಈ ಸಂದರ್ಭದಲ್ಲಿ ಸಮಾಜದ ಎಲ್ಲಾ ವಲಯಗಳಲ್ಲಿ ಮೂಲಭೂತ ಸೌಕರ್ಯಗಳಿಂದ ವಂಚನೆಗೊಳಗಾಗಿ ತುಳಿತಕ್ಕೊಳಪಟ್ಟ ಶೂದ್ರಾತಿಶೂದ್ರ ವರ್ಗಗಳು ಈ ಜ್ವಾಲೆಗೆ ಸಿಲುಕಿ ನರಳಾಡುತ್ತಿದ್ದವು. 19ನೇ ಶತಮಾನದ ಆದಿಭಾಗದಿಂದ ಬ್ರಿಟೀಷರಿಂದ ಎಲ್ಲಾ ವರ್ಗಗಳಿಗೂ ಸಮಾನವಾಗಿ ಸ್ಥಳೀಯ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಶಿಕ್ಷಣ ದೊರಕಿದ ಮೇಲೆ ಈ ಅಸಮಾನತೆಯ ಬೆಂಕಿಯನ್ನು ನಂದಿಸುವ ಮುಂಗಾರು ಮಳೆಯ ಹಾಗೆ ಹಲವಾರು ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಕರುಗಳು ಜನ್ಮವೆತ್ತಿ ಶೋಷಿತರ ಬಾಳಿಗೆ ತಂಪನೆರೆದರು. ಅವರಲ್ಲಿ ರಾಜಾರಾಮ್ ಮೋಹನ್ ರಾಯ್, ಸ್ವಾಮಿ ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ಈಶ್ವರಚಂದ್ರ ವಿದ್ಯಾಸಾಗರ್, ಐರಿಸ್‌ನ ಮಹಿಳೆ ಅನಿಬೆಸೆಂಟ್, ಜ್ಯೋತಿ ಬಾಫುಲೆ, ಸಾವಿತ್ರಿಬಾಯಿ ಫುಲೆ, ಗಾಂಧೀಜಿ, ಬಿ.ಆರ್. ಅಂಬೇಡ್ಕರ್, ನಾರಾಯಣಗುರು, ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಮುಂತಾದವರು ಪ್ರಮುಖರು.

ಇವರ ಪ್ರಭಾವ ದೇಶದ ಎಲ್ಲಾ ಪ್ರಾಂತ್ಯಗಳ ಸ್ಥಳೀಯ ಶೋಷಿತೋದ್ಧಾರಕರ ಮೇಲೆ ಅಂಕುರಿಸಿದಂತೆ ಮೈಸೂರು ಪ್ರಾಂತ್ಯದ ಆರ್. ಗೋಪಾಲಸ್ವಾಮಿ ಅಯ್ಯರ್‌ರವರ ಮೇಲೂ ಬೀರಿತು. ಹೀಗಾಗಿ ಇವರು ಮೈಸೂರು ಸಂಸ್ಥಾನದಾದ್ಯಂತ ಜಾತೀವಾದಿ ಸವರ್ಣೀಯರಿಂದ ನಿಕೃಷ್ಟವಾಗಿ ಕಡೆಗಣಿಸಲ್ಪಟ್ಟಿದ್ದ ಪಂಚಮ ಸಮುದಾಯವನ್ನು ಎಲ್ಲಾ ಜಾತಿಗಳಂತೆ ಸಮಾಜದ ಮುಖ್ಯವಾಹಿನಿಗೆ ತರಲು ತಮ್ಮ ಇಡೀ ಜೀವನವನ್ನು ಸವೆಸಿದರು. ಹೀಗಾಗಿ ಈ ಕಿರುಲೇಖನದಲ್ಲಿ ಮೊದಲಿಗೆ 'ಪಂಚಮರು ಎಂದರೆ ಯಾರು?', 'ಮೈಸೂರು ಸಂಸ್ಥಾನದಲ್ಲಿ ಪಂಚಮ ವರ್ಗದ ನರಕ ಸದೃಶ ಜೀವನ', 'ಪಂಚಮರ ಬಾಳಿನಜ್ಯೋತಿ ಆರ್. ಗೋಪಾಲಸ್ವಾಮಿ ಅಯ್ಯರ್‌ರವರ ಮೂಲ', 'ಅಯ್ಯರ್‌ರವರ ಮೇಲೆ ಅನಿಬೆಸೆಂಟ್ ಹಾಗೂ ಬೂಕರ್ ಟಿ. ವಾಷಿಂಗ್ಟನ್‌ರವರ ಪ್ರಭಾವ', 'ಪಂಚಮರ ಶೈಕ್ಷಣಿಕ ಪ್ರಗತಿಗಾಗಿ ಗೋಪಾಲಸ್ವಾಮಿ

---

[1] *ಸಮಾಜ–ವಿಜ್ಞಾನ ಶಿಕ್ಷಕರು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹೊಳೆನರಸೀಪುರ, ಹಾಸನ.*

ಅಯ್ಯರ್‌ರವರ ತ್ಯಾಗದ ಬದುಕು' ಹಾಗೂ 'ಸಂಸ್ಥಾನದಲ್ಲಿ ಪಂಚಮರ ಮೇಲಿನ ಅಸ್ಪೃಶ್ಯತಾಚರಣೆ ವಿರುದ್ಧ ಅಯ್ಯರ್‌ರವರ ದಿಟ್ಟ ಹೆಜ್ಜೆಗಳು' ಹಾಗೂ 'ಪಂಚಮರ ಗೋಪಾಲಸ್ವಾಮಿ ಅಯ್ಯರ್‌ರವರಿಗೆ ಸವಿನಯ ಸನ್ಮಾನ ಸಮಾರಂಭ' ಎಂಬ ಅಂಶಗಳನ್ನು ಕುರಿತು ಸವಿವರವಾದ ವಿವರಣೆಯ ಮೂಲಕ ತಿಳಿಸಲು ಪ್ರಯತ್ನಿಸಿದ್ದೇನೆ.

**ಪಂಚಮರು ಎಂದರೆ ಯಾರು?**

'ಪಂಚಮರು' ಎಂದರೆ ಮಾನವನ ಸ್ವಚ್ಛಂದ ಬದುಕಿಗೆ ಕಳಂಕಪ್ರಾಯವಾದ ಆರ್ಯರ 'ಚಾತುರ್ವರ್ಣಾಧರಿತ ಶ್ರೇಣೀಕೃತ ವ್ಯವಸ್ಥೆ' (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ)ಯನ್ನು ಧಿಕ್ಕರಿಸಿ, ಅವರ ಸಂಪ್ರದಾಯಬದ್ಧ ಮೂಢನಂಬಿಕಾಚರಣೆಗೆ ಬೆನ್ನುತೋರಿಸಿ ಹೊರಗೆ ನಡೆದವರಾಗಿದ್ದಾರೆ. ಜಾತೀವಾದಿ ವೈದಿಕಶಾಹಿಗಳು ಇವರಿಗೆ ಅಗೌರವವನ್ನು ಸೂಚಿಸುವಂತೆ ವಿವಿಧ ರೀತಿಯ ಹೆಸರುಗಳಿಂದ ಸಂಬೋಧಿಸಿದ್ದಾರೆ. ಅಂತ್ಯಜರು, ಬಹಿಷ್ಕೃತರು, ಮ್ಲೇಚರು, ಶ್ವಪಚರು, ಚಂಡಾಲರು, ಅಸ್ಪೃಶ್ಯರು, ಹೊಲೆಯರು, ಮಾದಿಗರು, ಮುಟ್ಟಲು ಯೋಗ್ಯವಲ್ಲದವರು, ಊರ ಹೊರಗೆ ವಾಸಿಸುವವರು, ಶೋಷಿತರು, ದಲಿತರು ಹೀಗೆ ಇನ್ನೂ ಮುಂತಾದ ಹೆಸರುಗಳಿಂದ ಮೈಸೂರನ್ನು ಒಳಗೊಂಡಂತೆ ದೇಶದ ಎಲ್ಲಾ ಭಾಗಗಳಲ್ಲಿ ಅವಮಾನಕರ ರೀತಿಯಲ್ಲಿ ಕರೆಯುತ್ತಿದ್ದರು.

ಪ್ರಗತಿಪರ ಚಿಂತಕರು, ಕವಿಗಳು ಆದ ಜಿ.ಹೆಚ್. ನಾಯಕ್‌ರವರು 'ಪಂಚಮರು ಅಥವಾ ದಲಿತರು' ಎಂಬ ಪದಕ್ಕೆ ವ್ಯಾಖ್ಯಾನವನ್ನು ನೀಡುತ್ತಾ, 'ಇದು ಒಂದು ಜಾತಿಯಲ್ಲ. ಅದೊಂದು ಸಾಮಾಜಿಕವಾಗಿ, ಆರ್ಥಿಕವಾಗಿ ಶತಶತಮಾನಗಳಿಂದ ಶೋಷಣೆಗೊಳಗಾಗಿರುವ ವರ್ಣಪದ್ಧತಿಯ ವಿಂಗಡಣೆಯಲ್ಲಿ ಸೇರಲ್ಪಡದ ಜಾತಿಬಾಹಿರ ಎಂದು ಪರಿಗಣಿಸಲ್ಪಟ್ಟ ಜನಸಮುದಾಯವನ್ನು ನಿರ್ದೇಶಿಸುವ, ಸಂಕೇತಿಸುವ, ಪ್ರತಿನಿಧಿಸುವ ಪದವಾಗಿದೆ' ಎಂದಿದ್ದಾರೆ.[1]

ಹಾಗೆಯೇ ದಲಿತಕವಿ ಹಾಗೂ ಪ್ರಗತಿಶೀಲ ಚಿಂತಕರೂ ಆದ ಅರವಿಂದ ಮಾಲಗತ್ತಿಯವರು 'ಶತಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು, ಒಬ್ಬ ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ ಊರ ಹೊರಗೆ ವಾಸಿಸಿ ಕೀಳು ವೃತ್ತಿಗೆ ಅವಲಂಬಿತರಾಗಿ ಹೆಸರು ಹೇಳಿಕೊಳ್ಳಲು ನಾಚಿಕೆಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ.'[2]

ಹೀಗೆ ಪಂಚಮರು ಅಥವಾ ಅಸ್ಪೃಶ್ಯರ ಮೇಲೆ ಅಸಮಾನತೆಯಾಧರಿತ ಅನಿಷ್ಟ ಆಚರಣೆಗಳನ್ನು ಚಾಚೂತಪ್ಪದೆ ಕಾರ್ಯಗತಗೊಳಿಸುವುದೇ ತಮ್ಮ ತಲಾತಲಾಂತರದ ಕಾಯಕವೆಂಬಂತೆ ನೀತಿಗೆಟ್ಟ ಸವರ್ಣೀಯ ಜಾತಿಗಳು ಮಾನವೀಯತೆಯನ್ನು ಮರೆತು ಉಗ್ರ ಸ್ವರೂಪದಲ್ಲಿ ತಳಸಮುದಾಯಗಳ ಮೇಲೆ ಶೋಷಣೆ ಮಾಡತೊಡಗಿದರು. ಈ ರೀತಿಯ ಅಸ್ಪೃಶ್ಯತಾಚರಣೆ ಅಂಟುರೋಗವೆಂಬಂತೆ ಮೈಸೂರು ಸಂಸ್ಥಾನಕ್ಕೂ ಹರಡಿತು. ಇಲ್ಲೂ ಕೂಡ ಪಂಚಮರು ಜಾತೀವಾದಿ ಮೇಲ್ವರ್ಗಗಳಿಂದ ಕ್ರೂರವಾಗಿ ಶೋಷಣೆಗೊಳಗಾಗಿ ಶೋಚನೀಯ ನರಕ ಸದೃಶ ಜೀವನಕ್ಕೆ ತಳ್ಳಲ್ಪಟ್ಟರು.

**ಮೈಸೂರು ಸಂಸ್ಥಾನದಲ್ಲಿ ಪಂಚಮ ವರ್ಗದ ನರಕ ಸದೃಶ ಜೀವನ**

ಮೈಸೂರು ಸಂಸ್ಥಾನವು ಬ್ರಿಟಿಷರ ಪ್ರಬಲ ಆಡಳಿತದ ಕಪಿಮುಷ್ಠಿಗೆ ಸಿಲುಕಿ 1831ರಿಂದ1881ರ ಅವಧಿಯ ಕಮಿಷನ್ನರುಗಳ ಆಳ್ವಿಕೆಯಲ್ಲಿ ತನ್ನ ಭೌಗೋಳಿಕ ಪ್ರದೇಶಗಳ ಅಸ್ತಿತ್ವಕ್ಕೆ ಆಧುನಿಕತೆಯ ರೂಪವನ್ನು ಪಡೆಯಿತು. ಈ ಸಂದರ್ಭದಲ್ಲಿ ಮೈಸೂರು ಸಂಸ್ಥಾನವು ಆಡಳಿತದ ಅನುಕೂಲಕ್ಕಾಗಿ ಜಿಲ್ಲೆ, ತಾಲ್ಲೂಕು, ಪಟ್ಟಣ, ಜಾಗೀರುಗಳಾಗಿ ವಿಭಾಗವಾಗಿ ಬ್ರಿಟಿಷರಿಂದ ಒಡೆಯರಿಗೆ ಪುನರ್ದಾನವಾಯಿತು. ಇದೇ ಸಂದರ್ಭದಲ್ಲಿ ಮೈಸೂರು ಸಂಸ್ಥಾನ 8 ಜಿಲ್ಲೆಗಳನ್ನು ಹೊಂದಿತ್ತು. ಅವುಗಳೆಂದರೆ,

1. ಮೈಸೂರು
2. ಬೆಂಗಳೂರು
3. ಕೋಲಾರ
4. ತುಮಕೂರು
5. ಹಾಸನ
6. ಚಿತ್ರದುರ್ಗ
7. ಶಿವಮೊಗ್ಗ
8. ಚಿಕ್ಕಮಗಳೂರು (ಕಡೂರು) ಪ್ರಮುಖವಾದವುಗಳಾಗಿದ್ದವು.[3]

ಸಂಸ್ಥಾನದ ಈ ಎಲ್ಲಾ ಜಿಲ್ಲೆಗಳಲ್ಲೂ ಕೂಡ ಜಾತೀವಾದಿ ಮೇಲ್ಜಾತಿಗಳು ಅಸ್ಪೃಶ್ಯತಾಚರಣೆ ಮೂಲಕ ಪಂಚಮ ಸಮುದಾಯಗಳಿಂದ ಸಮಾಜದಲ್ಲಿ ಸ್ವಾವಲಂಬಿತನದಿಂದ ಸ್ವತಂತ್ರವಾಗಿ ಬದುಕುವ ಹಕ್ಕುಗಳನ್ನು ಬಲವಂತವಾಗಿ ಕಸಿದುಕೊಂಡಿದ್ದವು. ಇದರ ಸ್ವರೂಪ ಹೇಗಿತ್ತೆಂದರೆ,

1. ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ನಿಷೇಧ.
2. ದೇವಸ್ಥಾನಗಳಿಗೆ ಪ್ರವೇಶ ನಿಷೇಧ.
3. ಕುಡಿಯಲು ನೀರನ್ನು ಒದಗಿಸುತ್ತಿದ್ದ ಬಾವಿ, ಕೆರೆ, ಕಟ್ಟೆಗಳಿಗೆ ಪ್ರವೇಶ ನಿರ್ಬಂಧ.
4. ಮೇಲ್ವರ್ಗಗಳ ಹೊಟೇಲ್, ಉಪಾಹಾರ ಮಂದಿರಗಳಿಗೆ ಪ್ರವೇಶ ನಿಷೇಧ.
5. ಒಂದು ವೇಳೆ ಇವರ ಉಪಾಹಾರ ಮಂದಿರಗಳ ಬಳಿ ಪಂಚಮರು ನೀರು ಅಥವಾ ಟೀ, ಕಾಫಿ ಕುಡಿಯಲು ಹೋದರೆ ಅವರಿಗೆ ಪ್ರತ್ಯೇಕ ಲೋಟಗಳನ್ನು ಹೊರಗಡೆ ಇಡುವುದು.
6. ಕ್ಷೌರಿಕ ಅಂಗಡಿಗಳಿಗೆ ಪ್ರವೇಶ ನಿಷೇಧ.
7. ಪಂಚಮರ ಪುರುಷರಾಗಲಿ ಅಥವಾ ಹೆಂಗಸರಾಗಲಿ ಮೌಲ್ಯಯುತವಾದ ಚಿನ್ನ, ಬೆಳ್ಳಿ, ಒಡವೆಗಳು, ಬೆಲೆಬಾಳುವ ಯಾವುದೇ ವಸ್ತ್ರಗಳನ್ನು ತೊಡುವಂತಿರಲಿಲ್ಲ.
8. ಇವರು ಸ್ವಂತ ಹೊಲ, ಗದ್ದೆ, ಜಮೀನುಗಳನ್ನು ಹೊಂದುವಂತಿರಲಿಲ್ಲ.
9. ಮೇಲ್ಜಾತಿಗಳ ಮನೆಯ ಕೊಟ್ಟಿಗೆಗಳಲ್ಲಿ ಜೀತದಾಳು, ಗುಲಾಮರಾಗಿ ಚಾಕರಿ ಮಾಡುವುದು.

10. ಇವರು ವಾಸಿಸುತ್ತಿದ್ದ ಗ್ರಾಮದಲ್ಲಿ ಮೇಲ್ವರ್ಗದವರ ಆದೇಶದಂತೆ ಹಬ್ಬಹರಿದಿನಗಳು, ಸಭೆ, ಸಮಾರಂಭ, ಮದುವೆ, ನಾಮಕರಣ, ಸಾವಿನ ಸುದ್ಧಿಗಳನ್ನು ಸಾರಿ ಹೇಳಲು ಕಡ್ಡಾಯವಾಗಿ ತಮಟೆ ಬಡಿಯಬೇಕಿತ್ತು.
11. ಮೇಲ್ವರ್ಗದ ಸ್ತ್ರೀಯರ ಹೆರಿಗೆ, ಮುಟ್ಟಾದ ಅಸಹ್ಯಕಾರಕವಾದ ವಲಸು ಬಟ್ಟೆಗಳನ್ನು ಅಸ್ಪೃಶ್ಯ ಹೆಂಗಸರೇ ಸ್ವಚ್ಛಗೊಳಿಸಬೇಕಿತ್ತು.
12. ಇವರು ಮೇಲ್ಜಾತಿ ಸವರ್ಣೀಯರ ಬಳಿ ಬಲವಂತ ದುಡಿಮೆಗಾರರಾಗಿ ಕೆಲಸ ಮಾಡಬೇಕಿತ್ತು. ಅಲ್ಲದೆ ತಾವು ಮಾಡಿದ ಕೆಲಸಕ್ಕೆ ಪ್ರತಿಫಲವನ್ನೇ ಅಪೇಕ್ಷಿಸದೆ ದಿನಪೂರ ಕಾರ್ಯನಿರ್ವಹಿಸಬೇಕಿತ್ತು.[4]

ಇವುಗಳಷ್ಟೇ ಅಲ್ಲದೆ ಪಂಚಮರು ಊರ ಹೊರಗೆ ವಾಸಿಸಬೇಕಿತ್ತು. ಸಾರ್ವಜನಿಕ ಬೀದಿಗಳಲ್ಲಿ ಚಪ್ಪಲಿ ಧರಿಸಿ ತಿರುಗಾಡುವಂತಿರಲಿಲ್ಲ. ಮೇಲ್ವರ್ಗಗಳ ಮನೆಗಳ ಒಳಗಡೆಗೂ ಪ್ರವೇಶ ಮಾಡುವಂತಿರಲಿಲ್ಲ. ಮಂಡಿಯ ಮೇಲಕ್ಕೆ ಪಂಚೆ ಅಥವಾ ಲುಂಗಿಗಳನ್ನು ಎತ್ತಿಕಟ್ಟುವಂತಿರಲಿಲ್ಲ. ಈ ಸಮುದಾಯಗಳ ಹೆಣ್ಣು ಮಕ್ಕಳು ಹಾಗೂ ಹೆಂಗಸರ ಮೇಲೆ ಮೇಲ್ಜಾತಿಗಳಿಂದ ಬಲತ್ಕಾರ ನಡೆದರೂ ಯಾರು ಪ್ರಶ್ನಿಸುವಂತಿರಲಿಲ್ಲ. ಊರಿನಲ್ಲಿ ಯಾವುದೇ ದೇವರ ಕಾರ್ಯದ ಮೆರವಣಿಗೆಗಳಲ್ಲಿ ಇವರು ಎಲ್ಲರ ಸರಿಸಮವಾಗಿ ಭಾಗವಹಿಸದಂತೆ ಕಟ್ಟಾಜ್ಞೆಯನ್ನು ಹೊರಡಿಸಲಾಗಿತ್ತು. ಒಂದು ವೇಳೆ ಮೇಲ್ವರ್ಗಗಳ ಸಂಪ್ರದಾಯಬದ್ಧ ನೀತಿನಿಯಮಗಳನ್ನು ಮೀರಿದರೆ ಅಸ್ಪೃಶ್ಯರ ಮೇಲೆ ಸಾಮಾಜಿಕ ಬಹಿಷ್ಕಾರದಂತಹ ಕಗ್ಗತ್ತಲೆಯ ಕೂಪಕ್ಕೆ ಊರಿನ ಜಾತೀವಾದಿಗಳು ಕರುಣೆಯಿಲ್ಲದೆ ದೂಡುತ್ತಿದ್ದರು.[5] ಹೀಗಾಗಿ ಇಂತಹ ಸಂದಿಗ್ಧ ಸನ್ನಿವೇಶದಲ್ಲಿ ಮೈಸೂರು ಸಂಸ್ಥಾನದಲ್ಲಿನ ಪಂಚಮ ಸಮುದಾಯಗಳನ್ನು ಮೇಲ್ಜಾತಿಗಳ **'ಶೋಷಣೆ'** ಎಂಬ ಮೃತ್ಯು ಸಂಕೋಲೆಯಿಂದ ಹೊರತರಲ ಇವರ ಅಂಧಕಾರದ ಬಾಳಿನ ದಿವ್ಯಜ್ಯೋತಿಯಾಗಿ ಆರ್. ಗೋಪಾಲಸ್ವಾಮಿ ಅಯ್ಯರ್‌ರವರು ಮೂರ್ತಗೊಂಡರು.

**ಪಂಚಮರ ಬಾಳಿನಜ್ಯೋತಿ ಆರ್. ಗೋಪಾಲಸ್ವಾಮಿ ಅಯ್ಯರ್‌ರವರ ಮೂಲ**

ಆರ್.ಗೋಪಾಲಸ್ವಾಮಿ ಅಯ್ಯರ್‌ರವರು ಕುಟುಂಬ ಮೂಲತಃ ಬ್ರಾಹ್ಮಣವರ್ಗದವರಾಗಿದ್ದು, ತಮಿಳುನಾಡಿನ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದರು. ಇವರ ಪೂರ್ವಜರು ಮದ್ರಾಸ್ ಪ್ರಾಂತ್ಯದ ತಂಜಾವೂರಿನವರು. 18ನೇ ಶತಮಾನದ ಅಂತ್ಯದಲ್ಲಿ ಇವರ ತಂದೆಯು ಸಂಸಾರ ಸಮೇತರಾಗಿ ಮದ್ರಾಸ್ ಪ್ರಾಂತ್ಯವನ್ನು ಬಿಟ್ಟು ಮೈಸೂರು ಸಂಸ್ಥಾನಕ್ಕೆ ಉದ್ಯೋಗಕ್ಕಾಗಿ ಬಂದಿದ್ದರು.[6] ಇಂತಹ ಸನ್ನಿವೇಶದಲ್ಲಿ ಅಯ್ಯರ್‌ರವರು 22 ಜೂನ್, 1878ರಲ್ಲಿ ಮೈಸೂರಿನಲ್ಲಿ ಜನಿಸಿದ್ದರು. ಅಂದು ಮೈಸೂರು ಸಂಸ್ಥಾನದ ಮಹಾರಾಜರು ಬ್ರಿಟಿಷ್‌ರ ಆದೇಶದಂತೆ ಇಂಗ್ಲಿಷ್ ಭಾಷೆಯಲ್ಲಿ ಪ್ರಕಾಂಡ ವಿದ್ವತ್ತನ್ನು ಗಳಿಸಿದ್ದ ಮದ್ರಾಸಿ ಬ್ರಾಹ್ಮಣರಿಗೆ ಉನ್ನತ ದರ್ಜೆಯ ಹುದ್ದೆಗಳನ್ನು ನೀಡುವ ಅವಕಾಶವನ್ನು ಮಾಡಿಕೊಟ್ಟಿದ್ದರು.[7] ಈ ಹಿನ್ನಲೆಯಲ್ಲಿ ಇವರ ತಂದೆ ರಾಮಸ್ವಾಮಿಯವರು ಮೈಸೂರಿನ ಉಚ್ಚ ನ್ಯಾಯಾಲಯದಲ್ಲಿ ಸರ್ಕಾರಿ ವಕೀಲನಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರು ತಮ್ಮ ಮಗನಿಗೆ ಉತ್ತಮ ಪಾಶ್ಚಿಮಾತ್ಯ ಶಿಕ್ಷಣವನ್ನು ಕೊಡಿಸಿ ಬೌದ್ಧಿಕವಾಗಿ ಪ್ರಗತಿಯತ್ತ ಸಾಗುವ ಎಲ್ಲಾ ಶೈಕ್ಷಣಿಕ ಕೌಶಲಗಳನ್ನು ಗಳಿಸಿಕೊಳ್ಳುವಂತೆ ಮಾಡಿದ್ದರು. ಇದರಿಂದ ಪಕ್ವತೆಯುಳ್ಳ ಸ್ಥಿರ ಜ್ಞಾನವನ್ನು ಸಂಪಾದಿಸಿದ ಅಯ್ಯರ್‌ರವರು ತಮ್ಮ

ವಿದ್ಯಾಭ್ಯಾಸದ ಸಂದರ್ಭದಲ್ಲಿ ಬ್ರಹ್ಮಸಮಾಜ, ಆರ್ಯಸಮಾಜ, ಪ್ರಾರ್ಥನಾ ಸಮಾಜ, ಸತ್ಯಶೋಧಕ ಸಮಾಜ, ರಾಮಕೃಷ್ಣ ಮಿಷನ್, ಥಿಯೋಸೋಫಿಕಲ್ ಸೊಸೈಟಿ ಹಾಗೂ ಕುದ್ಮಲ್ ರಂಗರಾವ್‌ರವರ 'ಡಿಪ್ರೆಸ್ಡ್ ಕ್ಲಾಸಸ್ ಮಿಷನ್'ಗಳು ಶೋಷಿತ ವರ್ಗಗಳ ಶೋಷಣೆಯುಕ್ತ ಜರ್ಜರಿತ ಬದುಕಿನ ವಿರುದ್ಧ ಹೋರಾಡುತ್ತಿದ್ದುದನ್ನು ತಿಳಿದಿದ್ದರು. ಹಾಗೆಯೇ ಅಮೆರಿಕಾದಲ್ಲಿ ಕಪ್ಪುಜನರ ಶಿಕ್ಷಣಕ್ಕಾಗಿ ಹಗಲಿರುಳು ಶ್ರಮಿಸುತ್ತಿದ್ದ ಬೂಕರ್ ಟಿ. ವಾಷಿಂಗ್ಟನ್‌ರವರ ಪ್ರಭಾವ ಬಹಳ ಪರಿಣಾಮಕಾರಿಯಾಗಿ ಅಯ್ಯರ್‌ರವರ ಮೇಲೆ ವ್ಯಾಪಿಸಿತ್ತು.[8]

**ಅಯ್ಯರ್‌ರವರ ಮೇಲೆ ಅನಿಬೆಸೆಂಟ್ ಹಾಗೂ ಬೂಕರ್ ಟಿ. ವಾಷಿಂಗ್ಟನ್‌ರವರ ಮಿಂಚು**

19ನೇ ಶತಮಾನದ ಆದಿಭಾಗದಿಂದಲೇ ಭಾರತದಾದ್ಯಂತ ಜಾತೀವಾದಿ ಸವರ್ಣೀಯರ ಮುಗ್ಧ ಕೆಳಜಾತಿಗಳ ಮೇಲಿನ ಕರುಣೆರಹಿತ ಕ್ರಾರ್ಯಗಳನ್ನು ಧೂಳೀಪಟ ಮಾಡಲು ಸಮಾಜೋ–ಧಾರ್ಮಿಕ, ಶೈಕ್ಷಣಿಕ ಸುಧಾರಣಾ ಚಳವಳಿಗಳು ಹಲವಾರು ಸಾಮಾಜಿಕ ಸುಧಾರಕರುಗಳಿಂದ ಪ್ರಾರಂಭವಾಗಿದ್ದವು. ಅದರಲ್ಲೂ 'ಥಿಯೋಸೋಫಿಕಲ್ ಸೊಸೈಟಿ'ಯು ಮದ್ರಾಸ್ ಪ್ರಾಂತ್ಯದಲ್ಲಿ ತನ್ನ ಪ್ರಧಾನ ತತ್ವಗಳಾದ 'ಸಾರ್ವತ್ರಿಕ ಸಹೋದರತೆ', 'ಸರ್ವರಿಗೂ ಜನಾಂಗಕ್ಕೂ ಸಮಾನ ಶಿಕ್ಷಣ' 'ಸ್ತ್ರೀಯರಿಗೆ ಸಮಾನ ಸ್ಥಾನಮಾನ' ಹಾಗೂ 'ವೇದ, ಉಪನಿಷತ್ತುಗಳು, ಸಾಂಕ್ಯ ಯೋಗ, ವೇದಾಂತ'ಗಳನ್ನು ಪಸರಿಸಲು ಪ್ರಯತ್ನಿಸುತ್ತಿತ್ತು.[9] ಇದರ ಪ್ರವರ್ತಕರಾದ ಐರಿಸ್ ಮಹಿಳೆ ಅನಿಬೆಸೆಂಟ್ ನೇತೃತ್ವದ ಅನಿಬೆಸೆಂಟ್‌ರವರ ಕಾರ್ಯವೈಖರಿ ಅಯ್ಯರ್‌ರವರಿಗೆ ತುಂಬಾ ಇಷ್ಟವಾಗಿತ್ತು.

ಹಾಗೆಯೇ 20ನೇ ಶತಮಾನದ ಅಮೇರಿಕಾದಲ್ಲಿ ಬೂಕರ್ ಟಿ. ವಾಷಿಂಗ್ಟನ್ (1856–1915)ರವರು ನಿಗ್ರೋಗಳ ಮೇಲೆ ಜನಾಂಗೀಯ ದ್ವೇಷಭಾವನೆ ಯನ್ನು ಇಟ್ಟುಕೊಂಡು ಭೀಬತ್ಸವಾಗಿ ಶೋಷಿಸುತ್ತಿದ್ದ ಬಿಳಿಯರ ದಬ್ಬಾಳಿಕೆಯ ವಿರುದ್ಧ ಸೆಟೆದು ನಿಲ್ಲಲು ಹಲವಾರು ಶಾಲಾ–ಕಾಲೇಜುಗಳನ್ನು ತೆರೆದಿದ್ದರು. ಇದರಿಂದ ಬೌದ್ಧಿಕವಾಗಿ ಪ್ರಜ್ಞಾವಂತರಾದ ಕಪ್ಪುಜನರು ಬಿಳಿಯರ ಶೋಷಣೆಗಳಿಂದ ವಿಮೋಚನೆ ಹೊಂದುವ ವಿವೇಚನೆ ಬೆಳೆಸಿಕೊಂಡರು. ಮಾತ್ರವಲ್ಲದೆ ಬಿಳಿಯರ ವಿರುದ್ಧ ತಮ್ಮವರನ್ನು ಸಂಘಟಿಸಿ ಶಿಕ್ಷಣ, ಉದ್ಯೋಗ, ನಾಗರಿಕತ್ವ ಹಾಗೂ ಶಾಶ್ವತ ನೆಲೆಗಾಗಿ ಕ್ರಾಂತಿ ನಡೆಸಿ ಇವುಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದರು. ಇವರ ಈ ಸಾಧನೆಯ ಹಿಂದೆ ಬೂಕರ್ ಟಿ. ವಾಷಿಂಗ್ಟನ್‌ರವರ ಮೇರು ವ್ಯಕ್ತಿತ್ವ ಪ್ರತಿಫಲಿಸಿತ್ತು.[10] ಜೊತೆಗೆ ರಾಮಕೃಷ್ಣ ಮಿಷನ್‌ನ ಸ್ವಾಮಿ ವಿವೇಕಾನಂದರು ಮೈಸೂರು ಸಂಸ್ಥಾನದ ಮಹಾರಾಜ 10ನೇ ಚಾಮರಾಜ ಒಡೆಯರು ತಮ್ಮನ್ನು ಸಂಸ್ಥಾನಕ್ಕೆ ಆಹ್ವಾನಿಸಿದ ಸಂದರ್ಭದಲ್ಲಿ ಅಲ್ಲಿನ ಪಂಚಮರ ಕಷ್ಟಗಳನ್ನು ಅರಿತು'ವಂಶಗತವಾಗಿ ಬ್ರಾಹ್ಮಣರು ಓದಬೇಕೆಂದರೆ ಅದಕ್ಕೆ ಹಣವ್ಯಯ ಮಾಡಬೇಡಿ. ಅದೇ ಹಣವನ್ನು ಹೊಲೆಯರ ವಿದ್ಯೆಗಾಗಿ ವಿನಿಯೋಗಿಸಿ.

ಐವತ್ತು ವರ್ಷ ದೇವರನ್ನು ಮರೆತುಬಿಡಿ. ಈ ಧರಿದ್ರ ದೇವರುಗಳನ್ನು ಉದ್ಧಾರ ಮಾಡಿ' ಎಂದು ಅರ್ಥಪೂರ್ಣವಾಗಿ ಹೇಳಿದ್ದರು.[11] ಇವೆಲ್ಲವುಗಳ ಪ್ರೇರಣೆ ಅಯ್ಯರ್‌ರವರ ಮನಸ್ಸನ್ನು ಗಾಢವಾಗಿ ಆಕರ್ಷಿಸಿದವು. ಇದರಿಂದ ಕಾರ್ಯಶೀಲರಾದ ಅಯ್ಯರ್‌ರವರು ಸಂಸ್ಥಾನದಲ್ಲಿ ಪಂಚಮರ ಶೈಕ್ಷಣಿಕ ಶ್ರೇಯೋಭಿವೃದ್ಧಿಗೆ ತಮ್ಮ ಬದುಕನ್ನೇ ಮುಡಿಪಾಗಿಟ್ಟರು.

**ಪಂಚಮರ ಶೈಕ್ಷಣಿಕ ಪ್ರಗತಿಗಾಗಿ ಗೋಪಾಲಸ್ವಾಮಿ ಅಯ್ಯರ್‌ರವರ ತ್ಯಾಗದ ಬದುಕು**

ಅಯ್ಯರ್‌ರವರು ಮೇಲ್ಕಾಣಿಸಿದ ಸಾಮಾಜಿಕ ಸುಧಾರಕರ ಪ್ರಭಾವದಿಂದ ಪ್ರೇರೇಪಿತರಾಗಿ ಮೈಸೂರು ಸಂಸ್ಥಾನದಲ್ಲೂ ಕೂಡ ಶತಶತಮಾನಗಳಿಂದಲೂ ಸಮಾಜದ ಮೂಲಭೂತ ಸೌಕರ್ಯಗಳಿಂದ ಮೋಸಕ್ಕೊಳಗಾಗಿ ಭೂಗತರಾಗಿದ್ದ ಪಂಚಮರ ಶೈಕ್ಷಣಿಕ ಪ್ರಗತಿಗಾಗಿ ತೀವ್ರತರವಾಗಿ ಕ್ರಿಯಾಶೀಲರಾದರು. ಪಂಚಮರ ಮೇಲೆ ಭಾವನಾತ್ಮಕ ವಾತ್ಸಲ್ಯವನ್ನು ಹೊಂದಿದ್ದ ಇವರು ಪಂಚಮರನ್ನು ಎಲ್ಲಾ ಜಾತಿಗಳಂತೆ ಸಮಾಜದ ಮೇಲ್ತರಕ್ಕೆ ತರಲು 'ಶಿಕ್ಷಣವೊಂದೇ ಬ್ರಹ್ಮಾಸ್ತ್ರ' ಎಂದು ತೀರ್ಮಾನಿಸಿ ತಮ್ಮ ಕುಟುಂಬದ ವಿರೋಧವಿದ್ದರೂ ಹತಾಶರಾಗದೆ ಮನೆಯಲ್ಲೇ ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಓದಲು, ಬರೆಯಲು, ಉಳಿದುಕೊಳ್ಳಲು ಅವಕಾಶ ಮಾಡಿಕೊಟ್ಟರು. ಅಲ್ಲದೆ ಈ ವಿದ್ಯಾರ್ಥಿಗಳಿಗೆ ಬಟ್ಟೆ, ಊಟ, ವಿದ್ಯೆಯನ್ನು ಧಾರೆ ಎರೆಯಲು ಆರಂಭಿಸಿದರು. ಅಯ್ಯರ್‌ರವರ ಈ ಸದ್ಗುಣ ಸ್ವಭಾವಕ್ಕೆ ಪತ್ನಿ ತಂಗಮ್ಮರವರು ಕೂಡ ಬೆನ್ನೆಲುಬಾದರು.[12] ಕಾಲಕ್ರಮೇಣ ಅಯ್ಯರ್‌ರವರು 1913ರಲ್ಲಿ ಮೈಸೂರಿನಲ್ಲಿ ಪಂಚಮ ಮಕ್ಕಳಿಗೆ ಪಂಚಮ ಬೋರ್ಡಿಂಗ್ ಸ್ಕೂಲ್ ಸ್ಥಾಪನೆಯಾಗಲು ಕಾರಣರಾದರು.[13]

ಅಯ್ಯರ್‌ರವರ ಪಂಚಮರ ಪರವಾದ ಸಾಮಾಜಿಕ ಕಳಕಳಿಯುಕ್ತ ಉದಾತ್ತ ಸೇವೆಯನ್ನು 1917ರ ಸಮಯದಲ್ಲಿ ಮೈಸೂರಿನ ಥಿಯೋಸೋಫಿಕಲ್ ಸೊಸೈಟಿ ಶಾಖೆಯ ಜಸ್ಟೀಸ್ ಸುಬ್ರಮಣ್ಯ ಅಯ್ಯರ್, ಜೆ. ಕೃಷ್ಣಮೂರ್ತಿರವರು ಗಮನಿಸಿದ್ದರು. ಇವರು ಮದ್ರಾಸ್‌ನ ಅಡ್ಯಾರ್‌ನಲ್ಲಿದ್ದ ಸೊಸೈಟಿಯ ಕೇಂದ್ರ ಕಛೇರಿಗೆ ಭೇಟಿ ನೀಡಿ ಅಯ್ಯರ್‌ರವರ ಸಾಮಾಜಿಕ ಸೇವೆಯ ಬಗ್ಗೆ ಅನಿಬೆಸೆಂಟ್‌ರವರ ಗಮನಕ್ಕೆ ತಂದರು. ಇದನ್ನು ಪುರಸ್ಕರಿಸಿದ ಅನಿಬೆಸೆಂಟ್‌ರವರು ಅಯ್ಯರ್‌ರವರ ಪಂಚಮರ ಸೇವೆಗೆ ಪ್ರೋತ್ಸಾಹ ಹಾಗೂ ಸಹಕಾರ ನೀಡಿ ಮತ್ತಷ್ಟು ವ್ಯಾಪಕವಾಗಿ ಕ್ರಿಯಾಶೀಲರಾಗುವಂತೆ ಹಾರೈಸಿದರು.[14] ಹೀಗಾಗಿ ಅಯ್ಯರ್‌ರವರು ಮುಂದೆ ಪೂರ್ಣಾವಧಿ ಪಂಚಮೋದ್ಧಾರ ಕಾಯಕದಲ್ಲಿ ತೊಡಗಿದರು. ಇವರ ಪಂಚಮೋದ್ಧಾರದ ಅರ್ಪಣಾ ಮನೋಭಾವದ ಹಿನ್ನಲೆಯಲ್ಲಿ 1918ರ ವೇಳೆಗೆ ತುಮಕೂರು, ಚಿಕ್ಕಮಗಳೂರು ಹಾಗೂ ಹಾಸನಗಳಲ್ಲಿ ಪಂಚಮ ಬೋರ್ಡಿಂಗ್ ಶಾಲೆಗಳು ಆರಂಭವಾದವು. ಮಾತ್ರವಲ್ಲದೆ 1922ರಲ್ಲಿ ಬೆಂಗಳೂರಿನಲ್ಲಿ, 1926ರಲ್ಲಿ ಹಾಸನದಲ್ಲಿ ಒಂದು ಪಂಚಮ ಹುಡುಗರ ಮಾಧ್ಯಮಿಕ ಶಾಲೆ ಹಾಗೂ 1929ರಲ್ಲಿ ಪುನಃ ಬೆಂಗಳೂರಿನಲ್ಲಿ ಪಂಚಮ ಬಾಲಕಿಯರ ವಸತಿ ಶಾಲೆ ಆರಂಭವಾಯಿತು.[15] ಈ ಜಿಲ್ಲೆಗಳನ್ನೂ ಒಳಗೊಂಡಂತೆ ಇವರು ಎಂತಹ ಶ್ರಮಜೀವಿ ಎಂದರೆ, ಪಂಚಮರು ವಾಸವಿದ್ದ ಸಂಸ್ಥಾನದ ಎಲ್ಲಾ ಜಿಲ್ಲೆಗಳಿಗೂ ತಮ್ಮ ಸೈಕಲ್‌ನಲ್ಲಿಯೇ ತಿರುಗುತ್ತಿದ್ದರು. ಅಲ್ಲದೆ ಇವರುಗಳ ಗುಡಿಸಲುಗಳಿಗೆ ಹೋಗಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮನವೊಲಿಸುತ್ತಿದ್ದರು. ಅಯ್ಯರ್‌ರವರ ಜೊತೆ ರಂಗೇಗೌಡ, ವರದರಾಜ ಅಯ್ಯಂಗಾರ್‌ರವರು ಊರಿಂದ ಊರಿಗೆ ತಿರುಗಿ ಪಂಚಮರ ಕುಟುಂಬಗಳಿಗೆ ಶಿಕ್ಷಣದ ಅರಿವು ಮೂಡಿಸಿ ರಾತ್ರಿಯಾದ ಸಂದರ್ಭದಲ್ಲಿ ಅವರುಗಳ ಮನೆಗಳಲ್ಲಿಯೇ ಊಟ ಮಾಡಿ ಮಲಗಿ ಬರುತ್ತಿದ್ದರು.[16]

ಇದೇ ಸಮಯದಲ್ಲಿ ಅಯ್ಯರ್‌ರವರ ಪ್ರಾಮಾಣಿಕ ಸೇವೆಯ ಬಗ್ಗೆ ತಿಳಿದ ನಾಲ್ವಡಿ ಕೃಷ್ಣರಾಜ ಒಡೆಯರು ಕೂಡ ಅಯ್ಯರ್‌ರವರಿಗೆ ಸಂಸ್ಥಾನದಲ್ಲಿ ಪಂಚಮರ ಶ್ರೇಯಸ್ಸಿನ ಅಭಿವೃದ್ಧಿ ಚಟುವಟಿಕೆಗಳಿಗೆ

ಸಂಬಂಧಿಸಿದಂತೆ ಯಾವಾಗ ಬೇಕಾದರೂ ನಮ್ಮನ್ನು ಭೇಟಿಯಾಗಬಹುದೆಂದು ಅನುಮತಿ ನೀಡಿದರು. ಅಲ್ಲದೆ ಅಯ್ಯರ್‌ರವರನ್ನು ದಿವಾನ್ ರಂಗಾಚಾರ್ಲು ಸ್ಥಾಪಿತ ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರನ್ನಾಗಿ ಆರಿಸಿದರು. ಇದರಿಂದ ಮತ್ತಷ್ಟು ಹುರುಪನ್ನು ಪಡೆದ ಅಯ್ಯರ್‌ರವರು ಕೋಲಾರದ ಕೆ.ಜಿ.ಎಫ್.ನ ಗಣಿಯಲ್ಲಿ ಮಕ್ಕಳ ಸಮೇತವಾಗಿ ಕೂಲಿ ಮಾಡಿಕೊಂಡು ಕಷ್ಟಕರವಾದ ಜೀವನವನ್ನು ಸಾಗಿಸುತ್ತಿದ್ದ ಪಂಚಮರ ಮಕ್ಕಳಿಗೆ ಬೆಂಗಳೂರು, ಮೈಸೂರುಗಳಲ್ಲಿ ಪಂಚಮ ಶಾಲೆಗಳಿಗೆ ದಾಖಲಿಸಿದರು. ಮಾತ್ರವಲ್ಲದೆ ಈ ಸಮುದಾಯದ ವಿದ್ಯಾರ್ಥಿಗಳು ಅಲ್ಲೇ ಉಳಿದು ಓದಲು ವಿದ್ಯಾರ್ಥಿನಿಲಯಗಳ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರು.[17]

ಜೊತೆಗೆ ಅಯ್ಯರ್‌ರವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಪಂಚಮ ವಿದ್ಯಾರ್ಥಿಗಳಿಗಾಗಿ ರಾಜ್ಯದಾದ್ಯಂತ ಮತ್ತಷ್ಟು ಪಂಚಮ ಶಾಲೆಗಳು ಮತ್ತು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಬೇಕೆಂದು ಒತ್ತಾಯಿಸಿದರು. ಇದನ್ನು ಒಪ್ಪಿದ ನಾಲ್ವಡಿಯವರು ಸಂಸ್ಥಾನದ ಬಹುತೇಕ ಜಿಲ್ಲೆಗಳಲ್ಲಿ 600ಕ್ಕಿಂತಲೂ ಹೆಚ್ಚು ವಿಶೇಷ ಪಂಚಮ ಶಾಲೆಗಳನ್ನು ತೆರೆದು ಈ ವರ್ಗದ ವಿದ್ಯಾರ್ಥಿಗಳಿಗೆ ದಾಖಲಾಗಿ ಉತ್ತಮ ಶಿಕ್ಷಣವನ್ನು ಪಡೆಯಲು ಅನುಕೂಲ ಮಾಡಿಕೊಟ್ಟರು. ಆದರೆ ಬಹುತೇಕ ಪಂಚಮ ವಿದ್ಯಾರ್ಥಿಗಳು ತಮ್ಮ ಅಸ್ಪೃಶ್ಯ ಜಾತಿಯ ಕೀಳರಿಮೆಯಿಂದ ಶಾಲೆಗೆ ಬರಲು ಹಿಂಜರಿಯುತ್ತಿದ್ದುದನ್ನು ಅಯ್ಯರ್‌ರವರು ಗಮನಿಸಿದರು. ತಕ್ಷಣ 'ನೀವು ಅಸ್ಪೃಶ್ಯರೆಂದು ಕೀಳರಿಮೆಯನ್ನು ಬಿಟ್ಟು ಉತ್ತಮ ಶಿಕ್ಷಣವನ್ನು ಪಡೆಯುವ ಕಡೆ ಗಮನಹರಿಸಬೇಕು. ಹಾಗೆಯೇ ವಿದ್ಯಾವಂತರಾಗಿ ಧೈರ್ಯದಿಂದ ಸಮಾಜದಲ್ಲಿ ತಲೆಎತ್ತಿ ತಿರುಗಾಡಬೇಕು. ಇದರಿಂದ ನೀವು ಸರ್ಕಾರದ ಉನ್ನತ ದರ್ಜೆಯ ಹುದ್ದೆಗಳಿಗೆ ಹೋಗಲು ಆರಂಭ ಮಾಡಿದರೆ ಅಸ್ಪೃಶ್ಯತೆ ತನ್ನಷ್ಟಕ್ಕೆ ತಾನೇ ಮಾಯಾವಾಗುತ್ತದೆ' ಎಂದು ಹಿತವಚನವನ್ನು ಹೇಳಿ ಪಂಚಮ ವಿದ್ಯಾರ್ಥಿಗಳ ಗಮನವನ್ನು ಸೆಳೆದರು. ಆದರೆ ಪಂಚಮ ಶಾಲೆಗಳಲ್ಲಿ ಕೆಲವು ಜಾತೀವಾದಿ ಬೋಧಕ ವೃಂದ ಪಾಠಪ್ರವಚನ ಮಾಡಲು ನಿರಾಕರಿಸಿದ್ದರು. ಇದರಿಂದ ಅಲ್ಪ ವಿಚಲಿತರಾದ ಅಯ್ಯರ್‌ರವರಿಗೆ ಬ್ರಾಹ್ಮಣವರ್ಗದ ವೆಂಕಟಲಕ್ಷ್ಮಿಯಮ್ಮ, ಬಿ. ವನಜಮ್ಮರವರುಗಳು ನಾವು ಪಂಚಮ ಮಕ್ಕಳಿಗೆ ವಿದ್ಯೆ ಕಲಿಸುತ್ತೇವೆಂದು ಮುಂದೆ ಬಂದುದು ಇವರಿಗೆ ಆತ್ಮಸ್ಥೈರ್ಯವನ್ನು ತಂದುಕೊಟ್ಟಿತ್ತು. ಇದೇ ಸಮಯದಲ್ಲಿ ಅಯ್ಯರ್‌ರವರ ಈ ಕಾರ್ಯಕ್ಕೆ ಮೈಸೂರಿನ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಪ್ರಧಾನ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಸಿ.ಆರ್. ರೆಡ್ಡಿಯವರು ನೀಡಿದ್ದ ನೆರವನ್ನು ಮರೆಯುವಂತಿಲ್ಲ.[18]

ತದನಂತರ ಅಯ್ಯರ್‌ರವರು 1926ರಲ್ಲಿ 180ಕ್ಕಿಂತ ಹೆಚ್ಚು ಪಂಚಮ ವಿದ್ಯಾರ್ಥಿಗಳಿಗೆ ಜೀವನದಲ್ಲಿ ಶಿಸ್ತು, ಒಳ್ಳೆಯ ಗುಣ, ಏಕಾಗ್ರತೆ, ಒಗ್ಗಟ್ಟನ್ನು ಮೈಗೂಡಿಸಿಕೊಳ್ಳುವಂತೆ ಕಾರ್ಯಪ್ರವೃತ್ತರಾದರು. ಇದಕ್ಕಾಗಿ ಇವರಿಗೆ ಮದ್ರಾಸ್‌ನ ಅಡ್ಯಾರ್‌ನಲ್ಲಿ 'ಸ್ಕೌಟ್ ತರಬೇತಿ'ಯನ್ನು ಕೊಡಿಸಿ ಥಿಯೋಸೋಫಿಕಲ್ ಸೊಸೈಟಿಯ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದರು. ಹಾಗೆಯೇ ನರಸಿಂಹರಾಜ ಹಾಸ್ಟೆಲ್‌ನ ಪಂಚಮ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಭಾಷೆಯಲ್ಲಿ ಪ್ರಾವಿಣ್ಯತೆಯನ್ನು ಪಡೆಯಲು ಇಂಗ್ಲಿಷ್ ಕಲಿಕೆ ತರಬೇತಿಯನ್ನು ಪಡೆದುಕೊಳ್ಳುವಂತೆ ಮಾಡಿದರು. ಇದರಿಂದಾಗಿ ಈ ವಿದ್ಯಾರ್ಥಿಗಳು ಕಲೆ, ಸಾಹಿತ್ಯ, ಸಂಗೀತ ಹಾಗೂ ಇನ್ನಿತರ ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ತಮ್ಮ ಕಲಾಪ್ರತಿಭೆಗಳನ್ನು ವೃದ್ಧಿಸಿಕೊಂಡರು. ಅಲ್ಲದೆ ಇವರು ತಮ್ಮ ಸಮುದಾಯ ದಿನನಿತ್ಯ ಪಡುತ್ತಿರುವ ಕಡುಕಷ್ಟದ ಜೀವನವನ್ನು ನಾಟಕಗಳ ಮೂಲಕ ಪ್ರದರ್ಶಿಸುತ್ತಿದ್ದರು.

ಇದನ್ನು ಕಂಡ ಅಯ್ಯರ್‌ರವರು 1930ರಲ್ಲಿ 'ಪಂಚಮರ ನಾಟಕ ಸಂಘ'ವನ್ನು ರಚಿಸಿಕೊಳ್ಳುವಂತೆ ಪ್ರೋತ್ಸಾಹಿಸಿದರು. ಈ ನಾಟಕ ತಂಡ ಮುಂದೆ 'ಶ್ರೀ ಆರ್. ಗೋಪಾಲಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ' ಎಂದು ಹೆಸರು ಪಡೆದು ಪಂಚಮರ ಸಾಂಸ್ಕೃತಿಕ ಅಭಿವ್ಯಕ್ತಿಯ ಮುಖವಾಣಿಯಾಯಿತು.[19] ಜೊತೆಗೆ ಪಂಚಮ ವಿದ್ಯಾರ್ಥಿಗಳಿಗೆ ಜೀವನದ ಮಹತ್ವ, ಉದ್ಯೋಗ, ದಿನಬಳಕೆಯ ಉತ್ಪನ್ನಗಳ ಉತ್ಪಾದನೆ, ಸಮಾಜಸೇವೆ, ಸಾಮಾಜಿಕ ಕಳಕಳಿ, ರಾಜಕೀಯ ಅಧಿಕಾರ, ಆರೋಗ್ಯ ಕಾಳಜಿ, ಉದ್ಯಾನವನಗಳ ನಿರ್ವಹಣೆಯ ಕೌಶಲ, ಸಂಘಟನಾತ್ಮಕ ಒಂದುಗೂಡುವಿಕೆಯ ಅರಿವನ್ನು ಮೂಡಿಸಿದರು. ಅಲ್ಲದೆ ಪಂಚಮ ವಿದ್ಯಾರ್ಥಿಗಳನ್ನು ಬಿನ್ನಿಮಿಲ್, ರಾಜ್‌ಮಿಲ್, ಗ್ಲಾಸ್ ಫ್ಯಾಕ್ಟರಿ, ಲಾಲ್ಬಾಗ್, ನಿಮಾನ್ಸ್ ಆಸ್ಪತ್ರೆ, ರಾಮಕೃಷ್ಣ ಮಿಷನ್ ಹಾಗೂ ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಗಳಿಗೆ ಕರೆದುಕೊಂಡು ಹೋಗಿ ವೈಯುಕ್ತಿಕ ಜವಾಬ್ದಾರಿಗಳ ನಿರ್ವಹಣೆಯ ಜ್ಞಾನವನ್ನು ತುಂಬಿದ್ದರು.[20]

ಅಯ್ಯರ್‌ರವರು ಪಂಚಮ ವಿದ್ಯಾರ್ಥಿಗಳಿಗೆ ವಿದ್ಯಾದಾತರಾಗಿದ್ದರಲ್ಲದೆ ಸ್ವಸಾಮರ್ಥ್ಯದಿಂದ ದುಡಿದು ನೆಮ್ಮದಿಯಿಂದ ಬದುಕಲು ಸರ್ಕಾರಿ ಕೆಲಸಗಳನ್ನು ಕೊಡಿಸಿದ ಉದ್ಯೋಗದಾತರೂ ಆಗಿದ್ದರು. ಉದಾಹರಣೆಗೆ: ವೈ.ಸಿ. ಹೊಂಬಾಳಯ್ಯರವರಿಗೆ ದಿವಾನ್ ಮಾಧವರಾವ್‌ರವರಿಂದ ಅಸಿಸ್ಟೆಂಟ್ ಕಮಿಷನರ್ ಹುದ್ದೆ, ಆದಿನಾರಾಯಣರವರಿಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆ, ವೇಲಾಯುಧಂರವರಿಗೆ ಶಿವಮೊಗ್ಗದ ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯಲ್ಲಿ ಎಂಜಿನಿಯರ್ ಹುದ್ದೆಗಳನ್ನು ಕೊಡಿಸಿದರು. ಜೊತೆಗೆ ಇವರ ಸ್ಫೂರ್ತಿಯಿಂದ ಹಲವಾರು ಪಂಚಮ ವಿದ್ಯಾರ್ಥಿಗಳು ಸರ್ಕಾರದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದರು. ಆರ್. ಭರಣಯ್ಯ (ದಲಿತ ಐ.ಎ.ಎಸ್. ಅಧಿಕಾರಿ ಹಾಗೂ ಕೆ.ಪಿ.ಎಸ್.ಸಿ. ಅಧ್ಯಕ್ಷರು), ಲಿಂಗಯ್ಯ (ಜಿಲ್ಲಾಧಿಕಾರಿಗಳು), ಹೆಚ್. ಮಾದಯ್ಯ (ಉನ್ನತ ಪೊಲೀಸ್ ಅಧಿಕಾರಿ, ರಾಷ್ಟ್ರಪತಿ ಪದಕ ವಿಜೇತರು), ಬಿ. ಬಸವಲಿಂಗಪ್ಪ (ಮಾಜಿ ಪೌರಾಡಳಿತ ಸಚಿವರು, ಕರ್ನಾಟಕ ಸರ್ಕಾರ, 1973), ಸಿದ್ದಯ್ಯ (ಜಿಲ್ಲಾಧಿಕಾರಿ), ಕೆ.ಟಿ. ರಾಮಸ್ವಾಮಿ, ಕಾಡಕೊತ್ತನಹಳ್ಳಿ ವೀರಭದ್ರಯ್ಯ, ಬಿ.ರಾಚಯ್ಯ (ಮಾಜಿ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಕೇರಳ, ಹಿಮಾಚಲ ಪ್ರದೇಶದ ರಾಜ್ಯಪಾಲರು), ಎಲ್. ಶಿವಲಿಂಗಯ್ಯ (ಮುಖ್ಯ ಎಂಜಿನಿಯರ್), ಜಿ. ಗೋಪಾಲ್ (ವೈದ್ಯಾಧಿಕಾರಿಗಳು) ಮುಂತಾದವರು ಪ್ರಮುಖರು.[21]

ಅಯ್ಯರ್‌ರವರು ತಮ್ಮ ಕರ್ತವ್ಯವನ್ನು ಕೇವಲ ಪಂಚಮ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಯ ಕಾರ್ಯಚಟುವಟಿಕೆಗಳಿಗೆ ಮಾತ್ರ ಸೀಮಿತಗೊಳಿಸಿಕೊಳ್ಳದೆ ಸಂಸ್ಥಾನದಾದ್ಯಂತ ಸವರ್ಣೀಯರಿಂದ ಅಸ್ಪೃಶ್ಯ ಸಮುದಾಯಗಳ ಮೇಲಾಗುತ್ತಿದ್ದ ದೌರ್ಜನ್ಯಗಳಿಗೆ ನ್ಯಾಯವನ್ನು ಒದಗಿಸಲು ದಿಟ್ಟಹೆಜ್ಜೆಗಳನ್ನು ಇಡುವುದರ ಮೂಲಕ ಅವಿರತ ಪ್ರಯತ್ನವನ್ನು ಮಾಡಿ ಸೈ ಎನಿಸಿಕೊಂಡಿದ್ದರು.

## ಸಂಸ್ಥಾನದಲ್ಲಿ ಪಂಚಮರ ಮೇಲಿನ ಅಸ್ಪೃಶ್ಯತಾಚರಣೆ ವಿರುದ್ಧ ಅಯ್ಯರ್‌ರವರ ದಿಟ್ಟಹೆಜ್ಜೆಗಳು

ಅಯ್ಯರ್‌ರವರು ಪಂಚಮ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುವುದರ ಜೊತೆಜೊತೆಯಲ್ಲಿ ಇವರ ಪರಿಪೂರ್ಣ ಸಮುದಾಯಗಳ ಶ್ರೇಯೋಭಿವೃದ್ಧಿಗೆ ಗಮನಹರಿಸಿದ್ದರು. ಇದೇ ಸಮಯದಲ್ಲಿ ಇವರಿಗೆ ಅಲಿಕ್ತಾನ್ ಸಾಬ್, ಅಂಬಲೆ ಅಣ್ಣಯ್ಯ ಪಂಡಿತ್, ವರದರಾಜ ಅಯ್ಯಂಗಾರ್, ರಂಗೇಗೌಡ ತಲಕಾಡು,

ಸಿ.ಆರ್.ರೆಡ್ಡಿ, ಮುರುಗೇಶ ಪಿಳ್ಳೈರವರುಗಳು ಬೆನ್ನೆಲುಬಾಗಿ ನಿಂತರು. ಹೀಗಾಗಿ 1920ರ ವೇಳೆಯಲ್ಲಿ ಪಂಚಮ ಕುಟುಂಬಗಳಿಗೆ ಸಂಸ್ಥಾನದಲ್ಲಿ ದುಡಿದು ಸ್ವಾವಲಂಭಿ ಜೀವನವನ್ನು ನಡೆಸಲು ಕೃಷಿಯೋಗ್ಯ ಭೂಮಿಯನ್ನು ನೀಡುವುದಲ್ಲದೆ, ವಾಸಿಸಲು ವಸತಿಗಳನ್ನು ನಿರ್ಮಿಸಿಕೊಡಬೇಕೆಂದು ಪ್ರತಿಪಾದಿಸಿದರು. ಹಾಗೆಯೇ ವೃತ್ತಿಪರ ಸೇವಾ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ ಬಡಗಿ, ನೇಕಾರ, ಹೊಲಿಗೆ, ಉದ್ಯಾನವನ ನಿರ್ವಹಣೆಯ ತರಬೇತಿಯನ್ನು ನೀಡಿ ಸ್ವ-ಉದ್ಯೋಗ ಕೈಗೊಳ್ಳಲು ಉತ್ತೇಜಿಸಿದರು. ಜೊತೆಗೆ ಆಂಧ್ರಪ್ರದೇಶ ಹಾಗೂ ಮದ್ರಾಸಿನಿಂದ ಮೈಸೂರಿಗೆ ಬಂದು ನೆಲೆಸಿದ್ದ ಜಾಡಮಾಲಿಗಳು ಅಥವಾ ಸಫಾಯಿ ಕರ್ಮಚಾರಿಗಳಿಗಾಗಿ 'ಆದಿಜಾಂಬವ ಸಂಘ'ವನ್ನು ಸ್ಥಾಪಿಸಿಕೊಳ್ಳುವಂತೆ ಪ್ರೋತ್ಸಾಹಿಸಿದ್ದರು.

ಮಾತ್ರವಲ್ಲದೆ ಅಯ್ಯರ್‌ರವರು ಪಂಚಮ ಸಮುದಾಯಗಳಿಗೆ ಸಮಾಜದಲ್ಲಿ ತಮ್ಮ ವಾಸ್ತವ ದುಸ್ಥಿತಿಗಳನ್ನು ತಿಳಿಸಿಕೊಡಲು ಸಂಸ್ಥಾನದ ಕೆಲವು ಸ್ಥಳಗಳಲ್ಲಿ 'ಪಂಚಮ ಸಮ್ಮೇಳನ'ಗಳನ್ನು ಏರ್ಪಡಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. 1916ರಲ್ಲಿ ಮೈಸೂರಿನ ಮಹಾರಾಣಿ ವಾಣಿವಿಲಾಸ ಮಹಿಳಾ ಪ್ರೌಢಶಾಲೆಯಲ್ಲಿ 'ಪ್ರಥಮ ಪಂಚಮ ಸಮ್ಮೇಳನ'ವನ್ನು ಏರ್ಪಡಿಸಲಾಗಿತ್ತು. ಹಾಗೆಯೇ 1919ರಲ್ಲಿ ಪಂಚಮರ ಮಹಾಸಭೆಯನ್ನು ಕರೆಯಲಾಗಿತ್ತು. ಇದರ ಅಧ್ಯಕ್ಷತೆಯನ್ನು ಮದ್ರಾಸಿನ ಎಂ.ಸಿ. ರಾಜಾರವರು ವಹಿಸಿದ್ದರು. 1922ರಲ್ಲಿ ಮೈಸೂರಿನ ಶಾರದಾ ವಿಲಾಸ ಪ್ರೌಢಶಾಲೆಯಲ್ಲಿ ಆಯೋಜಿಸಿ, ಇದರ ಅಧ್ಯಕ್ಷತೆಯನ್ನು ಅಂದಿನ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾಗಿದ್ದ ಜಸ್ಟೀಸ್ ಕೆ.ಎಸ್. ಚಂದ್ರಶೇಖರ್ ಅಯ್ಯರ್‌ರವರು ವಹಿಸಿದ್ದರು. 1923ರಲ್ಲಿ ಹಾಗೂ 1925ರಲ್ಲೂ ಪಂಚಮರ ಸಭೆಗಳನ್ನು ಸೇರಿಸಲಾಯಿತು. ಅಲ್ಲದೆ 1933ರಲ್ಲಿ ಮೈಸೂರಿನ ಎಡತೊರೆಯಲ್ಲಿ ಆಯೋಜಿಸಿ ಅಸ್ಪೃಶ್ಯ ಸಮುದಾಯಗಳನ್ನು ಒಂದೆಡೆ ಸೇರಿಸಿದ್ದರು. ಹಾಸನದ ಬೇಲೂರು ಹಾಗೂ ಮಂಡ್ಯದ ಮೇಲುಕೋಟೆಗಳಲ್ಲೂ ಈ ಸಮ್ಮೇಳನಗಳನ್ನು ಏರ್ಪಾಡು ಮಾಡಿದ್ದರು. ಈ ಸಮ್ಮೇಳನಗಳಲ್ಲಿ ಪಂಚಮರಿಗೆ ತಮ್ಮ ಮೂಲನಿವಾಸಿ ಪರಂಪರೆಯನ್ನು ತಿಳಿಸಿ 'ಆದಿದ್ರಾವಿಡ'ರೆಂದು ಸಂಬೋಧಿಸಲಾಯಿತು.[22] ಜೊತೆಗೆ ಅಸ್ಪೃಶ್ಯರು ಸಮುದಾಯಗಳು ಸಾರ್ವಜನಿಕ ದೇವಸ್ಥಾನಗಳು, ಕುಡಿಯುವ ನೀರನ್ನು ತೆಗೆದುಕೊಳ್ಳುವ ಕೆರೆ, ಕಟ್ಟೆ, ಬಾವಿಗಳಿಗೂ ಪ್ರವೇಶವನ್ನು ಹೋರಾಡಿ ಪಡೆದುಕೊಳ್ಳಬೇಕೆಂದು ತಿಳಿಸಲಾಯಿತು.[23]

ಅಸ್ಪೃಶ್ಯರು ಎಂಬ ಹೆಸರಿನ ಬದಲು 'ಆದಿಕರ್ನಾಟಕ' ಜನಾಂಗವೆಂದು ಕರೆದು ಇದನ್ನು ಕಾನೂನಿನ ಪ್ರಕಾರ ನೋಂದಾಯಿಸಲಾಯಿತು. ಅಲ್ಲದೆ ಇವರುಗಳ ನಡುವೆಯೇ ಇದ್ದ ಎಡಗೈ-ಬಲಗೈ ಎಂಬ ಉಪಜಾತಿಗಳ ಆಂತರಿಕ ಭಿನ್ನಾಭಿಪ್ರಾಯಗಳನ್ನು ಮೂಲೆಗೊತ್ತಿ ವೈಮನಸ್ಯವನ್ನು ಮರೆತು ಒಂದಾಗಿ ಬಾಳಬೇಕೆಂದು ಅಯ್ಯರ್‌ರವರು ಹಿತನುಡಿಗಳನ್ನಾಡಿದರು.[24] ಜೊತೆಗೆ ಮದ್ಯಪಾನ ತ್ಯಜಿಸಿ, ಸ್ವಚ್ಛತೆಯ ಮೂಲಕ ಆರೋಗ್ಯದ ಕಡೆ ಗಮನ ನೀಡಬೇಕೆಂದು ತಿಳಿಸುತ್ತಾ, ಪಂಚಮರ ಮತಾಂತರವಾಗುವ ನಿರ್ಧಾರವನ್ನು ವಿರೋಧಿಸಿದರು. ಅಲ್ಲದೆ ಸವರ್ಣೀಯರ ಜಾತೀಯತೆಯ ವಿರುದ್ಧ ಹೋರಾಡಿ ಸಮನಾಗಿ ಬದುಕುವ ಹಕ್ಕನ್ನು ಗಳಿಸಿಕೊಳ್ಳಬೇಕೆಂದು ಹೇಳಿ ಇದರ ಪರವಾಗಿ ತಾವೂ ಕೂಡ ಕಾರ್ಯನಿರತರಾದರು. ಈ ಸಂದರ್ಭದಲ್ಲಿ ಆದಿಕರ್ನಾಟಕ ಜನಾಂಗದಿಂದ ಕೆಲವು ಅಸ್ಪೃಶ್ಯತಾಚರಣೆ ವಿರುದ್ಧದ ಆಂದೋಲನಗಳಾದವು.

ಅವುಗಳಲ್ಲಿ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿ ಕುನ್ನೀರುಕಟ್ಟೆ ಪ್ರಕರಣ, ಮದ್ದೂರು ತಾಲ್ಲೂಕಿನ ಕೊಪ್ಪ ಹೋಬಳಿಯ ಕಾಡುಕೊತ್ತನಹಳ್ಳಿ ಕೆರೆ ನೀರು ಪ್ರಕರಣ ಹಾಗೂ ಭೂ ನಿರ್ವೇಶನ ವಂಚನೆ ವಿವಾದಗಳು, ಮಂಡ್ಯ ತಾಲ್ಲೂಕಿನ ಕೊಮ್ಮೇರಹಳ್ಳಿಯ ಕುಡಿಯುವ ನೀರಿಗಾಗಿ ಗಲಭೆ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದ ಎನ್.ಎಸ್.ಸುಬ್ಬರಾವ್‌ರವರು ದಲಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಕ್ಕೆ ದಾಖಲಾತಿ ಮತ್ತು ವಿದ್ಯಾರ್ಥಿವೇತನವನ್ನು ನೀಡಲು ನಿರಾಕರಿಸಿದ್ದರು. ಈ ಸಂದರ್ಭದಲ್ಲಿ ಅಯ್ಯರ್ ಮಧ್ಯ ಪ್ರವೇಶಿಸಿ ನಾಲ್ವಡಿಯವರಿಂದ ಕುಲಪತಿಗಳ ವಿರುದ್ಧ ಆಜ್ಞೆ ಹೊರಡಿಸಿ ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಎಲ್ಲಾ ಸೌಲಭ್ಯಗಳು ಸಿಗುವಂತೆ ಮಾಡಿದ್ದರು. ಅಲ್ಲದೆ ದಲಿತ ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಜೊತೆಗೂಡಿ ಊಟ ಮಾಡುವುದರ ಮೂಲಕ ಇಲ್ಲಿನ ಆಡಳಿತ ಹಾಗೂ ಅಡುಗೆಯವರು ಊಟದ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ಎಚ್ಚರಿಕೆಯ ಸಂದೇಶವನ್ನು ನೀಡಿದ್ದರು.[25] ಹಾಗೆಯೇ ಮೈಸೂರು ಜಿಲ್ಲೆಯ ಟಿ. ನರಸೀಪುರ, ನಂಜನಗೂಡು, ಬಿಳಿಗಿರಿರಂಗನ ಬೆಟ್ಟ, ಯಳಂದೂರು ಮುಂತಾದ ಸ್ಥಳಗಳಲ್ಲಿ ದೇವಸ್ಥಾನ ಪ್ರವೇಶ ನಿಷೇಧದ ವಿರುದ್ಧದ ಚಳವಳಿಗಳು ಸಂಭವಿಸಿದ್ದವು. ಇವುಗಳ ಹೋರಾಟಗಳಲ್ಲಿ ಅಯ್ಯರ್‌ರವರು ತಗಡೂರು ರಾಮಚಂದ್ರರಾವ್‌ರವರ ಸಹಕಾರದಿಂದ ಮಧ್ಯಪ್ರವೇಶಿಸಿ ಅಸ್ಪೃಶ್ಯ ಸಮುದಾಯಗಳಿಗೆ ನ್ಯಾಯವನ್ನು ಒದಗಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.[26]

ಹೀಗೆ ಅಯ್ಯರ್‌ರವರು ತಮ್ಮ ಇಡೀ ಜೀವನವನ್ನು ಪಂಚಮೋದ್ಧಾರಕ್ಕಾಗಿಯೇ ಅರ್ಪಿಸಿದ್ದ ತ್ಯಾಗವನ್ನು ಪರಿಗಣಿಸದೆ ಸವರ್ಣೀಯರು ವ್ಯಂಗ್ಯವಾಗಿ ಅಣಕಿಸುವ ಹಾಗೆ 'ಪಂಚಮರ ಗೋಪಾಲಸ್ವಾಮಿ ಅಯ್ಯರ್', 'ಹೊಲೆಯರ ಗೋಪಾಲಸ್ವಾಮಿ ಅಯ್ಯರ್', 'ಹರಿಜನರ ಗೋಪಾಲಸ್ವಾಮಿ ಅಯ್ಯರ್' ಎಂದು ಕರೆದು ನಿಂದಿಸುತ್ತಿದ್ದರು. ಇದನ್ನು ಲೆಕ್ಕಿಸದೆ ಸವಾಲಾಗಿ ಸ್ವೀಕರಿಸಿ ಅಸ್ಪೃಶ್ಯೋದ್ಧಾರಕ್ಕಾಗಿ ಶ್ರಮಿಸಿದ ಅಯ್ಯರ್‌ರವರಿಗೆ ಸಂಸ್ಥಾನದ ಅಸ್ಪೃಶ್ಯ ಸಮುದಾಯದ ಎಲ್ಲರೂ ಧನ್ಯತಾಭಾವದಿಂದ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಿದರು.

**ಪಂಚಮರ ಗೋಪಾಲಸ್ವಾಮಿ ಅಯ್ಯರ್‌ರವರಿಗೆ ಸವಿನಯ ಸನ್ಮಾನ ಸಮಾರಂಭ**

ಆದಿಕರ್ನಾಟಕ ಸಂಘದ ಎಲ್ಲರೂ 22 ಜೂನ್, 1942ರಲ್ಲಿ ಅಯ್ಯರ್‌ರ 60ನೇ ವರ್ಷದ ಜನ್ಮದಿನದ ಪ್ರಯುಕ್ತ ಮೈಸೂರಿನ ಕೇಂದ್ರಸ್ಥಾನದಲ್ಲಿರುವ ರಂಗಾಚಾರ್ಲು ಭವನದಲ್ಲಿ ಸನ್ಮಾನ ಸಮಾರಂಭವನ್ನು ಏರ್ಪಡಿಸಿದ್ದರು. ಈ ಕಾರ್ಯಕ್ರಮದ ವೇದಿಕೆಯನ್ನು ಅಯ್ಯರ್‌ರವರ ಜೊತೆ ಅಂಬಳೆ ಸುಬ್ರಮಣ್ಯ ಅಯ್ಯರ್, ಕೆ.ವಿ.ಅನಂತರಾಮನ್, ರಾವ್‌ಬಹದ್ದೂರ್ ರಾಮಸ್ವಾಮಿ, ಹೊಲೆಯರ್ ಶೇಷಾದ್ರಿ, ಆದಿಕರ್ನಾಟಕ ಸಂಘದ ಅಧ್ಯಕ್ಷ ವಿ.ಜೆ. ಡಿಸೋಜಾ ಮುಂತಾದವರು ಹಂಚಿಕೊಂಡಿದ್ದರು. ಇದೇ ಸಂದರ್ಭದಲ್ಲಿ ಅಯ್ಯರ್‌ರವರಿಂದ ವಿದ್ಯಾದೇವತೆಯನ್ನು ಒಲಿಸಿಕೊಂಡು ಸಮಾಜದಲ್ಲಿ ಉನ್ನತ ಹುದ್ದೆಗಳಿಗೆ ಭಾಜನರಾಗಿದ್ದ ಹಲವಾರು ಆದಿಕರ್ನಾಟಕ ಸಮುದಾಯದ ಅಧಿಕಾರಿಗಳು, ವಿದ್ಯಾರ್ಥಿಗಳು ಮನಪೂರ್ವಕವಾಗಿ ಭಾಗವಹಿಸಿ ಹೃದಯಪೂರ್ವಕವಾಗಿ ಈ ಸನ್ಮಾನವನ್ನು ಕಣ್ತುಂಬಿಕೊಂಡರು. ಈ ಸಂದರ್ಭದಲ್ಲಿ ಅಯ್ಯರ್‌ರವರು ಮಾತನಾಡುತ್ತಾ 'ಜಾತಿವಾದಿ ಬ್ರಾಹ್ಮಣರು ನನ್ನನ್ನು ಹೊಲೇರ್

ಗೋಪಾಲಸ್ವಾಮಿ ಎಂದು ವ್ಯಂಗ್ಯವಾಗಿ ಕರೆಯುತ್ತಾರೆ. ಈ ಹೆಸರು ನನಗೆ ನೂರಕ್ಕೆ ನೂರರಷ್ಟು ಅನ್ವಯಿಸುತ್ತದೆ. ನನಗೆ ಮಕ್ಕಳಿಲ್ಲವೆಂದು ಜನರು ಆಡಿಕೊಳ್ಳುತ್ತಿದ್ದಾರೆ. ಅದು ನಿಜಕ್ಕೂ ಸುಳ್ಳು. ನನಗೆ ಇಲ್ಲಿ ನೆರೆದಿರುವ ನೀವೆಲ್ಲರೂ ನನ್ನ ಮಕ್ಕಳು. ಹಳ್ಳಿಗಾಡಿನಲ್ಲಿರುವ ಸಾವಿರಾರು ಅಸ್ಪೃಶ್ಯರೆಲ್ಲ ನನಗೆ ಮಕ್ಕಳ ಸಮಾನ. ನನಗಾಗಿ ಎಂದೂ ಏನನ್ನು ಕೇಳಿಕೊಂಡಿಲ್ಲ. ಮಾಡಿಯೂಕೊಂಡಿಲ್ಲ. ನನ್ನ ಜೀವನದ ಕೊನೆಯುಸಿರು ಇರುವವರೆಗೂ ನಿಮ್ಮ ಸೇವೆಯನ್ನು ಮಾಡುತ್ತೇನೆ. ಅದರಲ್ಲಿಯೇ ತೃಪ್ತಿಯನ್ನು ಪಡೆಯುತ್ತೇನೆ' ಎಂದು ಹೇಳಿದ ತಕ್ಷಣ ಅಲ್ಲಿ ನೆರೆದಿದ್ದವರ ಹರ್ಷೋದ್ಗಾರದ ಕರತಾಡತನ ಮುಗಿಲು ಮುಟ್ಟಿತ್ತು.[27] ಜೊತೆಗೆ ಎಲ್ಲರೂ ತಮ್ಮ ಅಭಿನಂದನೆಗಳನ್ನು ಕೃತಜ್ಞತಾಪೂರ್ವಕವಾಗಿ ಸಲ್ಲಿಸಿದರು. ಮೈಸೂರಿನಲ್ಲಿ ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಿ ಇತಿಹಾಸವನ್ನು ಸೃಷ್ಠಿಸಿತು.

**ಉಪಸಂಹಾರ**

ಯಾರೇ ಆಗಲಿ ತಮ್ಮ ಜೀವನದಲ್ಲಿ ಎಲ್ಲರೂ ಒಪ್ಪುವ ರೀತಿಯಲ್ಲಿ ಗುರಿಯನ್ನು ಸಾಧಿಸುವ ಮಧ್ಯದಲ್ಲಿ ನೋವು, ಸಂಕಟ, ಅವಮಾನಗಳನ್ನು ಅನುಭವಿಸುವ ಸನ್ನಿವೇಶಗಳು ಒಂದಲ್ಲ ಒಂದು ರೀತಿಯಲ್ಲಿ ಎದುರಾಗುತ್ತಲೇ ಇರುತ್ತವೆ. ಇಂತಹವುಗಳನ್ನು ಸವಾಲಾಗಿ ಸ್ವೀಕರಿಸಿ ಸಾಧನೆಗೈದು ಎಲ್ಲರ ಸಮ್ಮುಖದಲ್ಲಿ ಸನ್ಮಾನಿತರಾಗುವುದು ಅವರ ದೃಢಸಂಕಲ್ಪದ ಯಶಸ್ಸಿಗೆ ಹಿಡಿದ ಕನ್ನಡಿ. ಹಾಗೆಯೇ ಅಯ್ಯರ್‌ರವರು ತಮ್ಮ ಬ್ರಾಹ್ಮಣ ಸಮುದಾಯಗಳಿಂದಲೇ ಪಂಚಮರ ಸರ್ವಾಂಗೀಣ ಅಭಿವೃದ್ಧಿಯ ಹಿನ್ನಲೆಯಲ್ಲಿ ವ್ಯಂಗ್ಯಯುತ ನಿಂದನೆ, ತೆಗಳಿಕೆಗೆ ಒಳಗಾದರೂ, ಅದನ್ನು ಲೆಕ್ಕಿಸದೆ ಅಂದುಕೊಂಡದ್ದನ್ನು ಸಾಧಿಸಿ ಕೀರ್ತಿಗೆ ಪಾತ್ರರಾದದ್ದು ನಿಜಕ್ಕೂ ಶ್ಲಾಘನೀಯ.

ಹೀಗಾಗಿ ಸಮಾಜದಲ್ಲಿ ಎಲ್ಲರೂ ಜಾತೀಯತೆಯ ಕೊಳಕನ್ನು ತಮ್ಮ ತನುಮನಗಳಲ್ಲಿ ಇರಿಸಿಕೊಂಡು ತಾರತಮ್ಯ, ಮೋಸ, ವಂಚನೆ, ದೌರ್ಜನ್ಯಗಳನ್ನು ಎಸಗದೆ ಸವಿಸಂಜೆಯಲ್ಲಿ ಪಕ್ಷಿಗಳು ಸಾಲುಸಾಲಾಗಿ ಯಾವುದೇ ತಾರತಮ್ಯವಿಲ್ಲದೆ ಒಗ್ಗಟ್ಟಿನಲ್ಲಿ ತಮ್ಮ ಗೂಡಿಗೆ ಸೇರಿ ಬಾಳುವಂತೆ ಒಗ್ಗೂಡಿ ಬದುಕಬೇಕು. ಅಲ್ಲದೆ 'ಸಮಾಜ ನಮಗೇನು ಕೊಟ್ಟಿತು ಎಂದು ಪ್ರಶ್ನಿಸುವ ಬದಲು ಸಮಾಜದ ಏಳಿಗೆಗೆ ನಮ್ಮ ಕೊಡುಗೆ ಏನು? ಎಂದು ತಮಗೆ ತಾವೇ ಪ್ರಶ್ನಿಸಿಕೊಂಡು ಜನ ಒಪ್ಪುವ ಸಾಧನೆಯತ್ತ ಗಮನ ಹರಿಸಬೇಕಾಗಿರುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

**ಕೊನೆ ಟಿಪ್ಪಣಿಗಳು**

1. ನಾಯಕ್. ಜಿ.ಹೆಚ್. (2004). ದಲಿತ ಹೋರಾಟ: ಗಂಭೀರ ಸವಾಲುಗಳು. ದಸಂಸ ಪ್ರಕಾಶನ. ಪು.ಸಂ.7.
2. ಅರವಿಂದ ಮಾಲಗತ್ತಿ. (1989). ದಲಿತ ಸಾಹಿತ್ಯ ಚಳವಳಿಯ ತಾತ್ವಿಕ ಚಿಂತನೆ. ಹೊಸದಿಕ್ಕು ಪ್ರಕಾಶನ. ಪು.ಸಂ.7.
3. Lelah Duskin. (1974). The Non-Brahmin Movement in Princely Mysore, University of Pennsylvenia, Ph.D. Pp.41.

4. Ambedkar. B.R. (1936). Annihilation of Caste. The Annual Conference of the JAT-PAT-TODAK MANDAL OF LAHORE. Pp.4.
5. ಜೋಯಿಸ್. ಎಂ.ಎನ್. ಕರ್ಮಯೋಗಿ ತಗಡೂರರ ಆತ್ಮಕಥನ ಮತ್ತು ಅಭಿನಂದನಾ ಗ್ರಂಥ. ಪು.ಸಂ.84–85.
6. ದಯಾನಂದ ಮಾನೆ. (2007). ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳವಳಿ. ಡಾ. ಬಿ.ಆರ್. ಅಂಬೇಡ್ಕರ್ ರಿಸರ್ಚ್ ಅಕಾಡೆಮಿ. ಪು.ಸಂ.51.
7. Bjorn Hettne. (1977). The Political Economy Indirect Rule Mysore 1881-1947, Ambika Publications. Pp.49–50.
8. ಜಿ. ಗೋಪಾಲ್, ಆರ್. ಗೋಪಾಲಸ್ವಾಮಿ ಅಯ್ಯರ್. ಕನ್ನಡ ಪುಸ್ತಕ ಪ್ರಕಾಶನ. ಬೆಂಗಳೂರು. ಪು.ಸಂ.1–9.
9. ಜೋಶಿ. ಡಿ.ಟಿ. (2007). ಆಧುನಿಕ ಭಾರತದ ಇತಿಹಾಸ. ವಿದ್ಯಾನಿಧಿ ಪ್ರಕಾಶನ, ಗದಗ. ಪು.ಸಂ.246.
10. ದಯಾನಂದ ಮಾನೆ. (2007). ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳವಳಿ. ಡಾ. ಬಿ.ಆರ್. ಅಂಬೇಡ್ಕರ್ ರಿಸರ್ಚ್ ಅಕಾಡೆಮಿ. ಪು.ಸಂ.53.
11. Gail Omvedt. (1994). Dalit's and the Democratic Revolution. SAGE Publication Pvt.Ltd, Pp.126.
12. Gopalaswamy Aiyar. R. (). The Emancipator of Dalit's. Google search, Karnatakablogspot.com.
13. ಲಕ್ಷ್ಮಣ ತೆಲಗಾವಿ. (1999). ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು ಏಕೀಕರಣೋತ್ತರ ಕರ್ನಾಟಕ ಚಳವಳಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ. ಸಂ.5, ಪು.ಸಂ.75.
14. ದಯಾನಂದ ಮಾನೆ. (2007). ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳವಳಿ. ಡಾ. ಬಿ.ಆರ್. ಅಂಬೇಡ್ಕರ್ ರಿಸರ್ಚ್ ಅಕಾಡೆಮಿ, ಪು.ಸಂ.52.
15. ಲಕ್ಷ್ಮಣ ತೆಲಗಾವಿ. (1999). ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳು ಏಕೀಕರಣೋತ್ತರ ಕರ್ನಾಟಕ ಚಳವಳಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ. ಸಂ.5, ಪು.ಸಂ.75.
16. ದಯಾನಂದ ಮಾನೆ. (2007). ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳವಳಿ, ಡಾ. ಬಿ.ಆರ್. ಅಂಬೇಡ್ಕರ್ ರಿಸರ್ಚ್ ಅಕಾಡೆಮಿ, ಪು.ಸಂ.53.
17. Gopalaswamy Aiyar. R. (). The Emancipator of Dalit's, Google search, Karnatakablogspot.com.
18. Gopalaswamy Aiyar. R. Google search, shodhaganga inflibnet.ac.in, Chapter IV, The Dalit Movement in Mysore District. Pp.257.

19. ಗೋಪಾಲ್. ಜಿ. ಆರ್. ಗೋಪಾಲಸ್ವಾಮಿ ಅಯ್ಯರ್. ಕನ್ನಡ ಪುಸ್ತಕ ಪ್ರಕಾಶನ, ಬೆಂಗಳೂರು. ಪು.ಸಂ.38.
20. ಅದೇ......, ಪು.ಸಂ.25–28.
21. ದಯಾನಂದ ಮಾನೆ. (2007). ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳವಳಿ. ಡಾ. ಬಿ.ಆರ್. ಅಂಬೇಡ್ಕರ್ ರಿಸರ್ಚ್ ಅಕಾಡೆಮಿ, ಪು.ಸಂ.54–55.
22. Gopalaswamy Aiyar. R. (). Google search, Shodhaganga inflibnet.ac.in, Chapter IV, The Dalit Movement in Mysore District. Pp.257.
23. ಅನಿತಾ.ಎಂ.ಎಸ್. (2012). ಆಧುನಿಕ ಮೈಸೂರು ಇತಿಹಾಸದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್(ಪರಿವರ್ತನಾಶೀಲ ಸಂಪ್ರದಾಯಬದ್ಧ ಸಮಾಜದ ಮೇಲೆ ಪಾಶ್ಚಿಮಾತ್ಯ ಪ್ರಭಾವ ಒಂದು ಸಮಗ್ರ ಅಧ್ಯಯನ 1884–1940), ಪ್ರಿಯದರ್ಶಿನಿ ಪ್ರಕಾಶನ, ಪು.ಸಂ.287.
24. Gail Omvedt. (1994). Dalit's and the Democratic Revolution. SAGE Publication Pvt.Ltd, Pp.130.
25. ದಯಾನಂದ ಮಾನೆ. (2007). ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳವಳಿ. ಡಾ. ಬಿ.ಆರ್. ಅಂಬೇಡ್ಕರ್ ರಿಸರ್ಚ್ ಅಕಾಡೆಮಿ, ಪು.ಸಂ.57–59.
26. ದಯಾನಂದ ಮಾನೆ. (2007). ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ದಲಿತ ಚಳವಳಿ. ಡಾ. ಬಿ.ಆರ್. ಅಂಬೇಡ್ಕರ್ ರಿಸರ್ಚ್ ಅಕಾಡೆಮಿ, ಪು.ಸಂ.56.
27. ವೆಂಕಟಸುಬ್ಬಯ್ಯ. ಹೆಚ್.ಸಿ. (1984). ಧನ್ಯಜೀವಿ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ಪು.ಸಂ.19–21.


IIMRD JOURNALS